ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 174/2023

| | | |
|---|---|---|
| ಹೆಸರು | - | ಪುಷ್ಪಾ |
| ತಂದೆಯ ಹೆಸರು | - | ಗಣಪತಿ ಅಂಬಿಗ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ಮನೆವಾರ್ತೆ ವ ವ್ಯವಹಾರ |
| ವಾಸ್ತವ್ಯ | - | ಕೆಳಗಿಕೇರಿ, ದಿವಗಿ, ಕುಮಟಾ |

- ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ -

ಪ್ರಶ್ನೆ - 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

ಉತ್ತರ -

ಪ್ರಶ್ನೆ - 2 ಪಿ ಡಬ್ಲ್ಯೂ 1 - ಸಂತೋಷ ರಾಮ ಮುಕ್ರಿ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಹಾಗೂ ದಿಗಂಬರ ಗಣಪತಿ ಅಂಬಿಗ, ನವೀನ ಮಂಜುನಾಥ ಅಂಬಿಗ ಸೇರಿ ಅವರ ಸಹಕಾರಿಗೆ ಭೇಟಿ ನೀಡಿ ನೀವು ಅವರ ಸಹಕಾರಿಗೆ ಸಾಲದ ಅರ್ಜಿ ಸಲ್ಲಿಸಿ ರೂ. 1,05,000/- ಗಳನ್ನು ಸಾಲವಾಗಿ ನೀಡುವಂತೆ ಸಲ್ಲಿಸಿದ ಅರ್ಜಿಯನ್ನು ಅವರ ಸಹಕಾರಿಯವರು ಪರಿಶೀಲಿಸಿ ನಿಮಗೆ ಓವರಡ್ರಾಫ್ಟ ಸಾಲ ಎಂತಾ ರೂ. 1,05,000/- ಗಳನ್ನು ದಿಃ 16-04-2019 ರಂದು ನೀಡಿದಂತೆ ನೀವು ಅವರ ಸಹಕಾರಿಯಿಂದ ಸಾಲವಾಗಿ ಪಡೆದಿದ್ದು ಇರುತ್ತಿದ್ದು ಸದರ ಸಾಲ ಪಡೆಯುವ ಸಾಲಕ್ಕೆ ನೀವು ಹಾಗೂ ದಿಗಂಬರ ಗಣಪತಿ ಅಂಬಿಗ, ನವೀನ ಮಂಜುನಾಥ ಅಂಬಿಗ ಅವರ ಸಹಕಾರಿಗೆ ಸಾಲದ ಕರಾರು ಪತ್ರ , ವಚನ ಪತ್ರ ವಗೈರೇ ದಾಖಲೆಗಳನ್ನು ಬರೆಸಿಕೊಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

ಪ್ರಶ್ನೆ – 3 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲದ ರಖಂನ್ನು ನೀವು ಮಾತಿನಂತೆ ವ ದಾಖಲೆಗಳಂತೆ ವಸೂಲ ಕೊಡದೇ ಇದ್ದುದರಿಂದ ಸದ ಸಾಲವು ಕಟಬಾಕೀಯಾಗಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 4 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲದ ರಖಂನ್ನು ವಸೂಲ ನೀಡಲು ನೀವು ಹಾಗೂ ಜಾಮೀನುದಾರರು ಜವಾಬುದಾರರಿರುತ್ತಾರೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 5 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಕಾರಣ ಸದರ ಸಾಲವು ಕಟಬಾಕೀಯಾಗಿದ್ದರಿಂದ ಸದರ ಸಾಲದ ರಖಂನ್ನು ವಸೂಲ ಕೊಡುವಂತೆ ಅವರ ಸಹಕಾರಿಯವರು ನಿಮ್ಮನ್ನು ಹಾಗೂ ಜಾಮೀನುದಾರರನ್ನು ಭೇಟಿಯಾಗಿ ಸದರ ಸಾಲದ ರಖಂನ್ನು ಬಡ್ಡಿ ಸಹಿತ ಮರುಪಾವತಿ ಮಾಡುವಂತೆ ವಿನಂತಿಸಿಕೊಂಡಾಗ ನೀವು ಸದರ ಸಾಲದ ರಖಂ ಪೈಕಿ ರಖಂನ್ನು ವಸೂಲ ಕೊಡುತ್ತೇನೆ ಆದರೆ ಸದರ ಸಾಲದ ರಖಂ ಪೈಕಿ ವಸೂಲ ನೀಡಲು ಈಗ ತನ್ನ ಹತ್ತಿರ ಕೈಯಲ್ಲಿ ನಗದಾಗಿ ಹಣವಿಲ್ಲಾ, ಆದ್ದರಿಂದ ನಿಮಗೆ ಚೆಕ್ ನ್ನು ಕೊಡುತ್ತೇನೆ , ನೀವು ಬ್ಯಾಂಕಿನಿಂದ ಹಣ ಪಡೆದುಕೊಳ್ಳಿರಿ ಅಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಸಿಂಡಿಕೇಟ್ ಬ್ಯಾಂಕ ಶಾಖಾ ಕುಮಟಾ ಇದರ ಚೆಕ್ ನಂ. 454201 ರೂ. 1,31,657/- ದಿಃ 27-08-2020 ನೇದನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 6 ಪಿ ಡಬ್ಲ್ಯೂ 1 – ಇವರು ಮುಂದುವರಿದು , ನಿಮ್ಮ ಮಾತಿನ ಮೇರೆಗೆ ಅವರ ಸಹಕಾರಿಯವರು ಸದರ ಚೆಕ್ ನ್ನು ವಠಾವಣೆ ಕುರಿತು ಅವರ ಬ್ಯಾಂಕರರಾದ ದಿ ಕೆ.ಡಿ.ಸಿ.ಸಿ. ಬ್ಯಾಂಕ ಲಿ. ಶಾಖಾ ಕುಮಟಾ ಇದಕ್ಕೆ ಹಾಜರು ಪಡಿಸಿದಾಗ ಸದರ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ನಗದಾಗದೇ ಮರಳಿ

ಬಂದಿದ್ದು ಇರುತ್ತದೆ ಎಂತಾ ದಿಃ 28-08-2020 ರಂದು ಬ್ಯಾಂಕರರು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

ಪ್ರಶ್ನೆ - 7 ಪಿಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲದೇ ಚೆಕ್ ನೀಡುವುದು ಎನ್ ಆಯ್ ಎಕ್ಟ ರನ್ವಯ ದಂಡನೀಯ ಅಪರಾಧವಾಗಿರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

ಪ್ರಶ್ನೆ - 8 ಪಿಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎನ್ನುವುದು ಗೊತ್ತಿರುತ್ತಾ ತಿಳಿದೂ ತಿಳಿದೂ ಅವರ ಸಹಕಾರಿಗೆ ವಸೂಲ ಕೊಡತಕ್ಕ ರಖಂನ್ನು ಬುಧ್ಯಾಪೂರ್ವಕವಾಗಿ ವಸೂಲ ಕೊಡದೇ ಮೋಸ ಪಡಿಸಬೇಕೆಂಬ ದುರುದ್ದೇಶದಿಂದ ಈ ಮೇಲೆ ವಿವರಿಸಿದ ಬೋಗಸ್ಸು ಚೆಕ್ ನೀಡಿ ಎನ್ ಆಯ್ ಎಕ್ಟರನ್ವಯ ಧಂಡನೀಯ ಶಿಕ್ಷಾರ್ಹ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

ಪ್ರಶ್ನೆ - 9 ಪಿಡಬ್ಲ್ಯೂ 1 - ಇವರು ಮುಂದುವರಿದು, ಹೀಗಿರುವಲ್ಲಿ ಅವರ ಸಹಕಾರಿಯವರು ಸದರ ಚೆಕ್ ಅಮಾನ್ಯಗೊಂಡ ಕುರಿತು ನಿಮಗೆ ಅವರ ವಕೀಲರ ಮೂಲಕ ದಿಃ 19-09-2020 ನೇ ನೋಟಿಸು ಕೊಡಿಸಿ ಸದರ ನೋಟಿಸು ಜ್ಯಾರಿಯಾದ 15 ದಿವಸದೊಳಗಾಗಿ ಸದರ ಚೆಕ್ ರಖಂನ್ನು ವಸೂಲ ನೀಡುವಂತೆ ಮಾಗಣಿ ಮಾಡಿ ಕಳಿಸಿದ ನೋಟಿಸು ನಿಮಗೆ ದಿಃ 20-09-2020 ರಂದು ಜಾರಿಯಾಗಿದ್ದೂ ಸಹ ಸದರ ನೋಟಿಸಿಗೆ ನೀವು ಉತ್ತರ ನೀಡಿದ್ದಾಗಲೀ ಚೆಕ್ ರಖಂ ವಸೂಲ ನೀಡಿದ್ದಾಗಲೀ ಇರುವುದಿಲ್ಲಾ ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 10 ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

ಉತ್ತರ –

ಪ್ರಶ್ನೆ – 11 ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 17-09-2025.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ